ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಜನವರಿ 2025 ಮಾಸ ಪತ್ರಿಕೆ

ಸಂಪುಟ/Volume : 47
ಸಂಚಿಕೆ/Issue : 04
ಪುಟ/Pages : 12
ಬೆಲೆ/Price : ₹ 15/–

Akhila Karnataka Shikshaka Samachar | January 2025 | Monthly






ಸ್ವಾಮಿ ವಿವೇಕಾನಂದರ ಜನ್ಮದಿನ
ಜನವರಿ 12 ರಿಂದ
ಸುಭಾಷ್ ಚಂದ್ರ ಬೋಸರ ಜನ್ಮದಿನ
ಜನವರಿ 23 ರ ರೊಳಗೆ ಒಂದು ದಿನ
**ಸಂಕಲ್ಪ ದಿನಾಚರಣೆ**ಯನ್ನು
ಆಚರಿಸೋಣ



A Journal of Karnataka Rajya Madhyamika Shikshaka Sangha (R.)

# ಸಂಪಾದಕೀಯ

ಜನವರಿ 01 ನಮಗೆ ಹೊಸ ವರ್ಷವೇ? ಖಂಡಿತ ಅಲ್ಲ. ಈ ದಿನದಂದು ಅದೇನು ಹೊಸದಿದೆ. ಹಿಂದಿನ ದಿನವೇ ಕೆಲವು ಯುವಕ, ಯುವತಿಯರು ಒಂದೆಡೆ ಸೇರುವುದು ಮಸ್ತಿ, ಮಜಾ ಮಾಡುವುದು ಮೌಢ್ಯದ ಪರಮಾವಧಿ. ಬ್ರಿಟೀಷರು ನಮ್ಮ ಭಾರತಕ್ಕೆ ಬಂದ ನಂತರ ಈ ಜನವರಿ 01 ರ ಆಚರಣೆ ಪ್ರಾರಂಭವಾದದ್ದು. ಈಗ ನಾವು ಪರಕೀಯರ ದಾಸ್ಯದಿಂದ ಪಾರಾಗಿ 75 ವರ್ಷ ಸಂದರೂ ಕೂಡ, ಇನ್ನೂ ಅದೇ ರೂಢಿ ಇಟ್ಟುಕೊಂಡಿರುವುದು ಎಷ್ಟು ಸರಿ? ನಾವು ಈ ಆಚರಣೆಯ ದಾಸ್ಯತ್ವದಿಂದ ಹೊರಬರೋಣ. ನಮ್ಮ ಹಿಂದೂಸ್ಥಾನ (ಭಾರತ)ದ ಮಕ್ಕಳಗೆಲ್ಲ ತಿಳಸೋಣ ನಮ್ಮ ಹೊಸವರ್ಷ ಜನವರಿ 01 ಅಲ್ಲ. ಅನಾದಿಕಾಲದಿಂದಲೂ ನಮ್ಮ ಹಿರಿಯರು ಆಚರಿಸಿಕೊಂಡು ಬರುತ್ತಿರುವ ಯುಗಾದಿಯೇ ಹೊಸವರ್ಷ.

ನಮ್ಮ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕ್ರಮಗಳಲ್ಲಿ ಒಂದಾದ ಸಂಕಲ್ಪ ದಿನಾಚರಣೆಯನ್ನು ಸ್ವಾಮಿ ವಿವೇಕಾನಂದರ ಜನ್ಮದಿನ ಜನವರಿ 12 ರಿಂದ ಸುಭಾಷ್ ಚಂದ್ರಭೋಸರ ಜನ್ಮದಿನ ಜನವರಿ 23ರವರೆಗೆ ಒಂದು ದಿನ ನಾವೆಲ್ಲ ಯೋಜಿಸೋಣ. ನಾವೆಲ್ಲ ಶಿಕ್ಷಕರು ನಮ್ಮ ಶಾಲೆಗಳಲ್ಲಿ, ಕ್ಲಸ್ಟರ್, ತಾಲ್ಲೂಕು ಮತ್ತು ಜಿಲ್ಲಾ ಹಂತಗಳಲ್ಲಿ ಒಟ್ಟಿಗೆ ಸೇರಿ ಶಿಕ್ಷಕ ವೃತ್ತಿಯ ಮಹತ್ವವನ್ನು ಜಾಗೃತಗೊಳಿಸುವ ಸಂಕಲ್ಪ ದಿನಾಚರಣೆಯ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡೋಣ.

ನಾವೆಲ್ಲ ಭಾರತೀಯರು ಜನವರಿ 26ರಂದು ಪ್ರಜಾರಾಜ್ಯೋತ್ಸವವನ್ನು ಭಾರತದ ಎಲ್ಲ ರಾಜ್ಯಗಳಲ್ಲೂ ಹೆಮ್ಮೆಯಿಂದ ಆಚರಣೆ ಮಾಡುತ್ತೇವೆ ಅಲ್ಲವೇ? ಅದೇಕೆಂದರೆ ನಮ್ಮ ಸಂವಿಧಾನದ ಪ್ರಮುಖ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಈ ವ್ಯವಸ್ಥೆಯ ಪಾವಿತ್ರ್ಯತೆಯನ್ನು ನಾವು ಕಾಪಾಡಿಕೊಳ್ಳುವುದು ನಮ್ಮ ಕರ್ತವ್ಯವಾಗಿರುತ್ತದೆ. ನಮ್ಮ ಶ್ರೇಷ್ಠವಾದ ಸಂವಿಧಾನ ರಚನೆಯಲ್ಲಿ ಪಾಲ್ಗೊಂಡ ಡಾ|| ಬಾಬಾಸಾಹೇಬ ಅಂಬೇಡ್ಕರ್, ಡಾ|| ಬಾಬು ರಾಜೇಂದ್ರ ಪ್ರಸಾದ್ ಮತ್ತು ಇತರ ಸದಸ್ಯರಿಗೂ ನಮ್ಮ ನಮನಗಳನ್ನು ಸಲ್ಲಿಸೋಣ.

ಸೂರ್ಯನು ದಕ್ಷಿಣಾಯನದಿಂದ ಉತ್ತರಾಯಣಕ್ಕೆ ಚಲಿಸುವ ಕಾಲಘಟ್ಟವೇ ಮಕರ ಸಂಕ್ರಮಣ. ಅಂದು ಎಲ್ಲರೂ ಮನೆ ಮನೆಗೆ ಎಳ್ಳು ಬೆಲ್ಲ ಹಂಚುವುದೇ ಒಂದು ಸಂಭ್ರಮ. ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತನಾಡೋಣ ಎಂಬ ನಮ್ಮ ಹಿರಿಯರ ಮಾತುಗಳಲ್ಲಿ ಅದೆಂತಹ ಮಹತ್ವ ಇದೆ ಅಲ್ಲವೇ? ಈ ಹಬ್ಬಗಳ ಮಹತ್ವವನ್ನು ನಾವು ಅರಿತು, ನಮ್ಮ ಕಿರಿಯರೆಲ್ಲರಿಗೂ ತಿಳಿಸುವುದು ಮುಖ್ಯವಾದುದು.

ನಮ್ಮ ಸಮಸ್ತ ಓದುಗರಿಗೆ ಮಕರ ಸಂಕ್ರಾಂತಿಯ ಮತ್ತು 75ನೇ ಗಣರಾಜ್ಯೋತ್ಸವದ ದಿನಾಚರಣೆಯ ಹಾರ್ದಿಕ ಶುಭಾಶಯಗಳು.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜಿ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎಸ್.


## ಪರಿವಿಡಿ


- ಸಂಕಲ್ಪ ಮಾಡುವುದು ಏನನ್ನು? – ಚಿದಾನಂದ ಆ ಕೇಸ್ಕರ ಪಾಟೀಲ 3
- ಮಕರ ಸಂಕ್ರಾಂತಿ – ಡಾ|| ಲೋಕೇಶ್ 4
- ಭಾರತೀಯ ಇತಿಹಾಸದ ವಿಕೃತೀಕರಣ – ಕೃ. ನರಹರಿ 5
- ಪೂರ್ವಸೂರಿಗಳೊಡನೆ ಅಂಕಣದಲ್ಲಿ 2 ಅ. ಪು. ನಾರಾಯಣಪ್ಪ – ನಂ. ನಾಗಲಕ್ಷ್ಮಿ 6
- ಜಪಾನ್ ನಮಗೆ ಮಾದರಿಯಾಗಬಲ್ಲದೆ? – ಹೆಚ್. ನಾಗಭೂಷಣ್ ರಾವ್ 7
- ಶಿಕ್ಷಣ ಸಂಕುಲದ ಅಭ್ಯಾಸವರ್ಗ 9
- ವರದಿಗಳು 11

# ವರದಿಗಳು



ಸರ್ಕಾರದಿಂದ ಪ್ರತಿ ತಿಂಗಳು ನೌಕರರ ವೇತನ ಅದರಲ್ಲೂ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವೇತನ ಬಜೆಟ್ ಕೊರತೆಯಿಂದ, ಅಥವಾ ಬಟವಾಡೆ ಅಧಿಕಾರಿಗಳ ವರ್ಗಾವಣೆಯಿಂದ ಅಥವಾ ಇತರೆ ಕಾರಣಗಳಿಂದ ವಿಳಂಬವಾಗುತ್ತಿದೆ. ಇದರಿಂದಾಗಿ ಸರಕಾರದ ಸಂಸ್ಥೆಯಾದ ಕರ್ನಾಟಕ ಸರ್ಕಾರ ವಿಮಾ ಇಲಾಖೆ (K G I D) ಮಾಸಿಕ ಕಂತು ಹಾಗೂ ಸಾಲದ ವಿಮಾ ಕಂತುಗಳ ವಿಳಂಬಕ್ಕೆ ಬಡ್ಡಿಯನ್ನು ವಿಧಿಸುತ್ತಿದೆ. ಅಲ್ಲದೆ ಪ್ರತಿ ತಿಂಗಳು ಈ ಕಂತುಗಳನ್ನು ನಗದು ರೂಪದಲ್ಲಿ ಬರಿಸಲು ಕೂಡ ಅವಕಾಶ ಇರುವುದಿಲ್ಲ. ಇದರಿಂದ ರಾಜ್ಯ ಸರ್ಕಾರಿ ನೌಕರರಿಗೆ ಅನ್ಯಾಯವಾಗುತ್ತಿದೆ.

ಈ ಕುರಿತು ಅಧಿವೇಶನದಲ್ಲಿ ಚರ್ಚಿಸಿ ಇದರಿಂದ ವಿನಾಯಿತಿ ನೀಡುವಂತೆ ಸರ್ಕಾರವನ್ನು ಆಗ್ರಹಿಸುವಂತೆ ರಾಜ್ಯ ಸರ್ಕಾರಿ ನೌಕರ ಸಂಘದ ಪದಾಧಿಕಾರಿಗಳು ಹಾಗೂ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳು ಜಂಟಿಯಾಗಿ ಮನವಿ ಪತ್ರವನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕಲ್ಬುರ್ಗಿ ಜಿಲ್ಲಾ ಘಟಕದ ನಿರ್ದೇಶಕ ಮಹೇಶ ಬಸರಕೋಡ ಅಳಂದ ತಾಲೂಕ ಘಟಕದ ನಿರ್ದೇಶಕರಾದ ಚಂದ್ರಶೇಖರ ಪಾಟೀಲ ಯಳಸಂಗಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾ ಅಧ್ಯಕ್ಷ ಸಂಜೀವ ಕುಮಾರ ಪಾಟೀಲ ಶಿಕ್ಷಕರುಗಳಾದ ಶಂಕರಲಿಂಗ ಕಲಶೆಟ್ಟಿ ಪ್ರಶಾಂತ ಪಾಟೀಲ ಮಹೇಶ ಪತ್ತಾರ ಇತರರು ಹಾಜರಿದ್ದರು.

---

1995 ರ ನಂತರ ಪ್ರಾರಂಭವಾದ ಅನುದಾನರಹಿತ ಕನ್ನಡ ಮಾಧ್ಯಮ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಅನುದಾನರಹಿತ ಶಾಲಾ ಕಾಲೇಜುಗಳ ಆಡಳಿತ ಮಂಡಳಿ ಮತ್ತು ನೌಕರರ ಒಕ್ಕೂಟವು ನಡೆಸುತ್ತಿರುವ ಹೋರಾಟದಲ್ಲಿ ಭಾಗವಹಿಸಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ಈ ಸಂದರ್ಭದಲ್ಲಿ 30 ಕ್ಕೂ ಹೆಚ್ಚು ಮಠಾದೀಶ ಸ್ವಾಮೀಜಿಗಳು, ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಶೀಲ ನಮೋಶಿ ಸರ್, ಶ್ರೀ. ಹಣಮಂತ ನಿರಾಣಿ ಸರ್ ಶ್ರೀ. ಎಸ್. ವಿ. ಸಂಕನೂರ ಸರ್, ಡಾ ಹೆಚ್ ವಿ ಬೆಳಗಲಿ ಸರ್, ಶಿವಪ್ಪ ಸರ್ ಹೊರಗಿನಮಠ ಸರ್, ಸನದಿ ಸರ್, ಎಸ್ ಎಸ್ ಮಠದ ಸರ್ ಮತ್ತು ಇತರರು ಜೊತೆಗಿದ್ದರು.



---



ಶಿಕ್ಷಣ ಸಂಕುಲದ ಒಂದು ದಿನದ ಕಾರ್ಯಾಗಾರ 1ನೇ ಡಿಸೆಂಬರ್ –2024 ರಂದು ಉದ್ಘಾಟನೆ

---



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ದ ವತಿಯಿಂದ ಮುಖ್ಯೋಪಾಧ್ಯಾಯರು ಮತ್ತು ಪ್ರಾಚಾರ್ಯರ ಸಂಪರ್ಕ ಅಭಿಯಾನ ಪ್ರಾರಂಭವಾಗಿದ್ದು, ಇವತ್ತು ಧಾರವಾಡ ಜಿಲ್ಲೆಯ ಕಲಘಟಗಿಯಲ್ಲಿ ವಿವಿಧ ಶಾಲಾ, ಕಾಲೇಜುಗಳಿಗೆ ಬೇಟಿ ನೀಡಲಾಯಿತು. ನಿಯೋಗದಲ್ಲಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಗಂಗಾಧರಾಚಾರಿ, ಸಂಘಟನಾ ಕಾರ್ಯದರ್ಶಿ ವೃಷಭೇಂದ್ರಸ್ವಾಮಿ, ರಾಜ್ಯ ಕಾರ್ಯದರ್ಶಿ ಶ್ರೀಧರ ಪಾಟೀಲ ಕುಲಕರ್ಣಿ ಭಾಗವಹಿದ್ದರು.



ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘದ
ವಿವಿಧ ರಾಜ್ಯಗಳ ಕೋಶಾಧ್ಯಕ್ಷರ ಸಭೆ

MAG(3)/NPP/23/2020-21 Registered No. RNI 45459/85
Posted at Bangalore PSO Bangalore -560 026
Date of Publishing : 17-01-2025 Date of Posting 20th or 21st of every month Posted at Periodical Rate

# ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಬೃಹತ್ ಧರಣಿ ಸತ್ಯಾಗ್ರಹ





ಕರ್ನಾಟಕ ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘ (ರಿ.) "ಪ್ರಾಣ ಬಿಟ್ಟೇವು ಪಿಂಚಣಿ ಬಿಡೆವು" ಎಂದು ವಿವಿಧ ಬೇಡಿಕೆಗಳ ಬೃಹತ್ ಧರಣಿ ಸತ್ಯಾಗ್ರಹವನ್ನು ಬೆಳಗಾವಿಯ ಸುವರ್ಣ ಸೌಧದ ಮುಭಾಂಗದಲ್ಲಿ ಸತ್ಯಾಗ್ರಹ ನಡೆಯುತ್ತಿರುವ ಹೋರಾಟದಲ್ಲಿ ಭಾಗವಹಿಸಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದಿಂದ ಸಂಪೂರ್ಣ ಬೆಂಬಲ ಘೋಷಣೆ ಮಾಡಲಾಯಿತು.

ಈ ವೇಳೆಯಲ್ಲಿ ಶಿಕ್ಷಣ ಸಚಿವರಾದ ಶ್ರೀ. ಮಧುಬಂಗಾರಪ್ಪ ಅವರು, ಮಾಜಿ ವಿಧಾನಪರಿಷತ್ ಸದಸ್ಯರಾದ ಶ್ರೀ ಅರುಣ ಶಹಾಪುರ ಸರ್, ವಿಧಾನ ಪರಿಷತ್ ಸದಸ್ಯರಾದ ಶ್ರೀ. ಸಿ. ಪುಟ್ಟಣ್ಣ ಅವರು, ಶ್ರೀ. ಡಿ. ಟಿ. ಶ್ರೀನಿವಾಸ್ ಅವರು, ಶ್ರೀ ಶಶೀಲ್ ನಮೋಶಿ ಸರ್, ಶ್ರೀ ಎಸ್ ವಿ ಸಂಕನೂರ ಸರ್, ಶ್ರೀ ಹನುಮಂತ ನಿರಾಣಿ ಸರ್, ಶ್ರೀ ಭೋಜೇಗೌಡರು, ಶ್ರೀ ಹೆಚ್ ಕೆ ವಿವೇಕಾನಂದ ಸರ್, ಕನಕದಾಸ ಶಿಕ್ಷಣ ಸಮಿತಿ ಕಾರ್ಯದರ್ಶಿಗಳಾದ ಶ್ರೀ ರವೀಂದ್ರನಾಥ ದಂಡಿನ್ ಸರ್, ಅಧ್ಯಕ್ಷರಾದ ಹನುಮಂತಪ್ಪ ಸರ್ ,ಪ್ರಧಾನ ಕಾರ್ಯದರ್ಶಿ ಮುತ್ತುರಾಜ್ ಸರ್, ಶ್ರೀಮತಿ ಮಾಲಿನಿ ಮೇಡಂ, ಸುಧೀಂದ್ರ ದೇಶಪಾಂಡೆ ಸರ್, ಸಂಘದ ಉಪಾಧ್ಯಕ್ಷರಾದ ಗಂಗಾಧರಾಚಾರಿ ಸರ್, ಚಿದಾನಂದ ಪಾಟೀಲ ಸರ್, ಸಂಘಟನಾ ಕಾರ್ಯದರ್ಶಿಗಾಳದ ವೃಷಭೇಂದ್ರಸ್ವಾಮಿ ಸರ್, ಆರ್ ಕೊಟ್ರಪ್ಪ ಸರ್ ಹಾಗೂ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

## ಗಮನಿಸಿ

ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು, ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ

**akss1950@gmail.com**

ಇ–ಮೇಲ್‌ಗೆ ಕಳುಹಿಸಿಕೊಡಿ

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com